ದಿನಾಂಕ **07.04.2021** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀಸವಾಲು ಃ ಶ್ರೀ ಕೆ.ಯು. ವಕೀಲರಿಂದಃ**

1. ನಾನು 10ನೇ ತರಗತಿಯ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಪಿ.ಎಲ್.ಡಿ ಬ್ಯಾಂಕಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದೇನೆ ಎಂದರೆ ಸರಿ. ನಾನು ಸಾಕಷ್ಟು ಪ್ರಕರಣದಲ್ಲಿ ಸಾಕ್ಷಿ ನುಡಿದಿದ್ದೇನೆ ಎಂದರೆ ಪರಿಚಯಸ್ಥರ ಪ್ರಕರಣಗಳಲ್ಲಿ ಮಾತ್ರ ನುಡಿದಿದ್ದೇನೆ. ದಾವಾ ಸರ್ವೆ ನಂಬರ್ ಎಷ್ಟು ಎಂದರೆ ಸರ್ವೆ ನಂಬರ್ 229/01 ವಿಸ್ತೀರ್ಣ 06 ಎಕರೆ 14 ಗುಂಟೆ. ಅದಕ್ಕೆ ಯಾವ ಚಕ್ಕುಬಂದಿ ಎಂದರೆ ಪೂರ್ವಕ್ಕೆ ಸರ್ವೆ ನಂಬರ್ 229/01, ಪಶ್ಚಿಮಕ್ಕೆ ಲಕ್ಷ್ಮೀರಂಗನಾಥ ರವರ ಜಮೀನು, ಉತ್ತರಕ್ಕೆ ವಾಸದ ಮನೆಗಳು ನಂತರ ರಸ್ತೆ ಮತ್ತು ದಕ್ಷಿಣಕ್ಕೆ ಕೆರೆ.

2. 1ನೇ ಪ್ರತಿವಾದಿಯ ಜಮೀನಿನ ಸರ್ವೆ ನಂಬರ್ 229/02 ಎಂದರೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿಯ ಜಮೀನಿನ ಸರ್ವೆ ನಂಬರ್ 229/03 ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2ನೇ ಪ್ರತಿವಾದಿಗಳ ಜಮೀನನ್ನು ನೋಡಿದ್ದೇನೆ. 1ನೇ ಪ್ರತಿವಾದಿಯ ಜಮೀನಿನಲ್ಲಿ ಅಡಿಕೆ ಮತ್ತು ತೆಂಗಿನ ತೋಟ ಇದೆ ಎಂದರೆ ಸರಿ. 2ನೇ ಪ್ರತಿವಾದಿಯು ತನ್ನ ಜಮೀನಿನಲ್ಲಿ ಅಡಿಕೆ ತೋಟ ಮತ್ತು 1 ಫಾರಂ ಹೌಸ್ ಕಟ್ಟಿದ್ದಾರೆ ಎಂದರೆ ಸರಿ. ನಿ.ಡಿ.2 ರಲ್ಲಿ ಕಂಡು ಬರುವ ವ್ಯಕ್ತಿಯು 1ನೇ ಪ್ರತಿವಾದಿ ಎಂದರೆ ಸರಿ. ನಿ.ಡಿ.2 ರಲ್ಲಿ 1ನೇ ಪ್ರತಿವಾದಿಯ ಪಕ್ಕದಲ್ಲಿ ಕಾಣುವ ತೋಟ ಅವರ ಜಮೀನು ಎಂದರೆ ಸರಿ, ಸರ್ವೆ ನಂಬರ್ 229/01 ರಲ್ಲಿಯೂ ಸಹ ಅಡಿಕೆ ತೋಟ ಮತ್ತು ತೆಂಗಿನ ಮರಗಳು ಇವೆ ಎನ್ನುತ್ತಾರೆ. ನಿ.ಡಿ.6 ರಲ್ಲಿ ಕಾಣುವ ತೋಟ 1ನೇ ಪ್ರತಿವಾದಿಯದ್ದು ಎಂದರೆ ಸರಿ. ನಿ.ಡಿ.1 ರಲ್ಲಿ 2ನೇ ಪ್ರತಿವಾದಿಯ ಮನೆ ಮತ್ತು ತೋಟ ಇದೆ ಎಂದರೆ 2ನೇ ಪ್ರತಿವಾದಿಯು ವಾದಿಯ ಜಮೀನನ್ನು ಒತ್ತುವರಿ ಮಾಡಿದ್ದಾರೆ ಎನ್ನುತ್ತಾರೆ. ನಿ.ಡಿ.1 ರಲ್ಲಿ ಕಂಡುಬರುವ ರಸ್ತೆ ಸುಮಾರು 30 ಅಡಿಯ ಡಾಂಬಾರು ರಸ್ತೆ ಎಂದರೆ ಸರಿ. ಸದರಿ ರಸ್ತೆ ಕಳ್ಳಂಬೆಳ್ಳದಿಂದ ಪಿಳ್ಳಯ್ಯನಪಾಳ್ಯ ಮತ್ತು ಇತರೆ ಹಳ್ಳಿಗಳಿಗೆ ಹೋಗುತ್ತದೆ ಎಂದರೆ ಸರಿ. ಸದರಿ ರಸ್ತೆಯನ್ನು ಸರ್ಕಾರದ ವೆಚ್ಚದಿಂದ ಮಾಡಲಾಗಿದೆ ಎಂದರೆ ಸರಿ.

3. 2ನೇ ಪ್ರತಿವಾದಿಯು ಒತ್ತುವರಿ ಮಾಡಿರುವ ಬಗ್ಗೆ ದಾಖಲೆ ನೋಡಿದ್ದೀರಾ ಎಂದರೆ ಸರ್ವೆ ಕಾಲಕ್ಕೆ ನಾನು ಹಾಜರಿದ್ದು ತಿಳಿದಿರುತ್ತದೆ. ಸರ್ವೆ ದಿನಾಂಕ ನೆನಪಿಲ್ಲ, ಅಕ್ಕ-ಪಕ್ಕದ ಜಮೀನಿನ ಸಾಕಷ್ಟು ಜನ

ಹಾಜರಿದ್ದರು. ಆ ದಿನ ಬಂದಿದ್ದ ಸರ್ವೇಯರ್ ರವರ ಹೆಸರು ನಾನು ತಿಳಿದುಕೊಂಡಿಲ್ಲ. ನನ್ನ ಸಮಕ್ಷಮ ಯಾವುದೇ ಸರ್ವೆ ಮಾಡಿಲ್ಲ ಮತ್ತು 2ನೇ ಪ್ರತಿವಾದಿ ಯಾವುದೇ ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ರಸ್ತೆಯು 1 ಮತ್ತು 2ನೇ ಪ್ರತಿವಾದಿಗಳ ಜಮೀನಿನ ಪಶ್ಚಿಮಕ್ಕೆ ಇದೆ ಎಂದರೆ ಪಶ್ಚಿಮಕ್ಕೆ ಚಿಕ್ಕಬಾದಪ್ಪನವರ ಜಮೀನು ಇದೆ ಎನ್ನುತ್ತಾರೆ. ಮೇಲೆ ಹೇಳಿದ ಡಾಂಬಾರು ರಸ್ತೆ ಮುಂದೆ ಕೆರೆ ಅಂಚಿನಲ್ಲಿ ಸಾಗುತ್ತದೆ ಎಂದರೆ ಸರಿ.

4. ಸರ್ವೆ ನಂಬರ್ 229/01 ರಲ್ಲಿ ಮಧ್ಯಭಾಗದಲ್ಲಿ ರಸ್ತೆ ಇತ್ತು ಎಂದರೆ ಸರಿಯಲ್ಲ. ಸದರಿ ರಸ್ತೆಯನ್ನು ಚಿಕ್ಕಬಾದಪ್ಪ ಮತ್ತು ಅವರ ಪೂರ್ವಜರು ವ್ಯವಸಾಯಕ್ಕೆ ಅನುಕೂಲವಾಗುವಂತೆ ಪೂರ್ವದ ಅಂಚಿಗೆ ರಸ್ತೆ ಬಿಟ್ಟುಕೊಂಡಿದ್ದಾರೆ ಎಂದರೆ ಸರಿ. ಮೊದಲು 15 ರಿಂದ 20 ಅಡಿ ಇದ್ದ ಕಚ್ಚಾ ರಸ್ತೆಯನ್ನು ಈಗ 30 ಅಡಿಗಳ ಡಾಂಬಾರು ರಸ್ತೆ ಮಾಡಲಾಗಿದೆ ಎಂದರೆ ಈಗಿರುವ ರಸ್ತೆ ಸುಮಾರು 20 ಅಡಿ ಮಾತ್ರ ಇದೆ. ನಾನು ವಾದಿಯ ಕುಟುಂಬದೊಂದಿಗೆ ತುಂಬಾ ವಿಶ್ವಾಸದಿಂದ ಇದ್ದೇನೆ ಎಂದರೆ ಎಲ್ಲರೊಂದಿಗೂ ವಿಶ್ವಾಸದಿಂದ ಇದ್ದೇನೆ. ವಾದಿಯ ಸರ್ವೆ ನಂಬರ್ 229/01 ರಲ್ಲಿ ಯಾವುದೇ ಅಡಿಕೆ-ತೆಂಗಿನ ತೋಟ ಇಲ್ಲ ಎಂದರೆ ಸರಿ, ಒತ್ತುವರಿಯಾಗಿರುವ ಜಮೀನಿನಲ್ಲಿ 1 ಮತ್ತು 2ನೇ ಪ್ರತಿವಾದಿಗಳು ಅಡಿಗೆ-ತೆಂಗಿನ ತೋಟ ಮಾಡಿದ್ದಾರೆ. 1 ಮತ್ತು 2ನೇ ಪ್ರತಿವಾದಿಗಳು ವಾದಿಯ ಸರ್ವೆ ನಂಬರ್ 229/01 ರ ಜಮೀನಿನಲ್ಲಿ ಯಾವುದೇ ವಿಸ್ತೀರ್ಣವನ್ನು ಒತ್ತುವರಿ ಮಾಡಿ ಅಡಿಕೆ-ತೆಂಗಿನ ತೋಟ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿ ಜೊತೆ ನಾನು ವಿಶ್ವಾಸದಿಂದ ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಂಗತಿಗಳ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ,

ಸಹಿ/-

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.